ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ. 743 /2019

ಸಿ.ಡಬ್ಲೂ:6 ಪಿ.ಡಬ್ಲೂ:4

ಸಾಕ್ಷಿಗೆ ದಿನಾಂಕ ಃ- 24/08/2023 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಕಮಲಾಬಾಯಿ |
| ತಂ/ಗಂ. ಹೆಸರು | ಬಾಲಚಂದ್ರ ಬಿಸ್ಸೆ |
| ವಯಸ್ಸು | 60 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ಶಿವಣಗಿ |

ಮುಖ್ಯ ವಿಚಾರಣೆ ಃ ಶ್ರೀ ಎಪಿಪಿ ಯವರಿಂದ

ಚಾ ಸಾ 1 ನನ್ನ ಸೊಸೆ. ಉಳಿದ ಸಾಕ್ಷಿದಾರರ ಗೊತ್ತು. ನಾನು ನಮ್ಮ ಮನೆಯಲ್ಲಿ ನನ್ನ ಮಗನಾದ ಮಾರುತಿ, ನನ್ನ ಸೊಸೆ ಗೀತಾ ನನ್ನ 4 ಜನ ಮೊಮ್ಮಕ್ಕಳು ಕೂಡಿ ವಾಸವಾಗಿದ್ದೇವೆ. ನನ್ನ ಸೊಸೆ ಮತ್ತು ಮಗ ಮತ್ತು ಮೊಮ್ಮಕ್ಕಳು ಅಂಬಾಭವಾನಿ ಜಾತ್ರೆಗೆ ಶಿವಣಗಿಗೆ 4 ವರ್ಷಗಳ ಹಿಂದೆ ಟಾಟಾ ವಾಹನ ನನ್ನ ಮೊಮ್ಮಗನಾದ ಚಾಸಾ 4 ರವರ ವಾಹನದಲ್ಲಿ ಹೋಗಿರುತ್ತಾರೆ. ಜಾತ್ರೆ ಮುಗಿಸಿ ಮರಳಿ ಬಾರುವಾಗ ಆಗ ಮಳೆ ಬರುತ್ತಿತ್ತು ಅವರೊಂದಿಗೆ ನಾನು ಕೂಡಾ ಹೋಗಿರುತ್ತೇನೆ. ಮಳೆ ಬರುವ ಕಾರಣ ಮಳೆ ಬಡಿಯುತ್ತದೆ ಎಂದು ವಾಹನಕ್ಕೆ ಮಳೆ ತಡೆಯಲು ತಡ ಪತ್ರೆ ಕಟ್ಟುತ್ತಿರುವಾಗ ಒಂದು ಮೋಟಾರ್ ಸೈಕಲ್ ಬಂದು ದಡ್ ಅಂತಾ ನನ್ನ ಮಗನಿಗೆ ಡಿಕ್ಕಿಪಡಿಸಿದ್ದು ಆತ ಹಾರಿ ಕೆಳಗಡೆ ಬಿದ್ದ. ನಂತರ ಆತನ ತಲೆಗೆ, ಕಾಲಿಗೆ ಮತ್ತು ಕಿವಿಯಿಂದ ರಕ್ತ ಬರುತ್ತಿತ್ತು. ಮೋಟಾರ್ ಸೈಕಲ್ ಚಾಲಕ ಹಾಯಿಸಿ ಮುಂದೆ ಹೋಗಿ ಬಿದ್ದಿದ್ದ. ಆಗ ರಾತ್ರಿ 10.30 ಗಂಟೆ ಆಗಿರಬಹುದು.

ನನ್ನ ಮಗ ನಂತರ ಸ್ಥಳದಲ್ಲಿಯೇ ಮರಣ ಹೊಂದಿರುತ್ತಾನೆ. ಈ ಬಗ್ಗೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೆನೆ. ಮೋಟಾರ ಸೈಕಲ್ ಸವಾರ ಅಪಘಾತವಾದ ನಂತರ ನಾನು ನೋಡಿರುತ್ತೇನೆ. ಆತನನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ಸದರಿ ಅಪಘಾತ ಮೋಟಾರ್ ಸೈಕಲ್ ತಪ್ಪಿ ನಿಂದಾಗಿ ಅಪಘಾತವಾಗಿರುತ್ತದೆ.

( ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅದಕ್ಕೆ ಆರೋಪಿ ಪರ ವಕೀಲರು ಯಾವುದೇ ತಕರಾರು ವ್ಯಕ್ತಪಡಿಸದ ಕಾರಣ ಮತ್ತು ಸಾಕ್ಷಿಯು ಪ್ರತ್ಯೇಕ್ಷ ಸಾಕ್ಷಿಯಾಗಿದ್ದು ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಪಾಟೀ ಸವಾಲು ಃ ಎ.ಪಿ.ಪಿ. ಯವರಿಂದ

ದಿನಾಂಕ 29-07-2019 ರಂದು ಅಪಘಾತವಾಗಿರುತ್ತದೆ ಎಂದರೆ ಇದ್ದಿರಬಹುದು. ದಿನಾಂಕ 29-07-2019 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ನಿಜ. ಮೋಟಾರ್ ಸೈಕಲ್ ಚಾಲಕ ಹೆಸರು ನನಗೆ ಗೊತ್ತಾಗಿದ್ದು ಆತನ ಹೆಸರು ರಿಯಾಜ್ ತಾಳಿಕೋಟೆ ಅಂತಾ ಇತ್ತು ಎಂದರೆ ನಿಜ. ಟಾಟಾ ಏಸ್ ವಾಹನದ ಸಂಖ್ಯೆ. ಕೆಎ 28 ಎ 7348 ಅಪಘಾತಪಡಿಸಿದ ಮೋಟಾರ್ ಸೈಕಲ್ ಸಂಖ್ಯೆ. ಎಂ ಹೆಚ್ 07 ಬಿ 0595 ಅಂತ ಇರುತ್ತದೆ ಎಂದರೆ ನಿಜ. ಮೋಟಾರ್ ಸೈಕಲ್ ಚಾಲಕ ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ನನ್ನ ಮಗನಿಗೆ ಅಪಘಾತಪಡಿಸಿರುತ್ತಾನೆ ಎಂದರೆ ನಿಜ. ಆ ಕುರಿತು ಚಾ ಸಾ 1 ರವರು ದೂರು ದಾಖಲು ಮಾಡಿರುತ್ತಾರೆ ಎಂದರೆ ನಿಜ.

ಪಾಟೀ ಸವಾಲು ಶ್ರೀಮತಿ ಆರ್ ಎಮ್ ಶಿ ವಕೀಲರಿಂದ

ಗೂಡ್ಸ ವಾಹನ ನನ್ನಮೊಮ್ಮಗ ಚಲಾಯಿಸುತ್ತಿದ್ದ ಆತನ ವಯಸ್ಸು 25 ವರ್ಷ ಇದ್ದಿರಬಹುದು. ದೇವರ ಗುಡಿಗೆ ಮಗ, ಸೋಸೆ, ನಾನು ಮತ್ತು ದೊಡ್ಡ ಮಗ ಅವನ ಹೆಂಡತಿ ಮಕ್ಕಳು ಹೋಗಿರುತ್ತೇವೆ. ಸದರಿ ಗಾಡಿ ನಿಲ್ಲಿಸಿದ ಜಾಗದಲ್ಲಿ ಕತ್ತಲೆ ಇತ್ತು ಎಂದರೆ ನಿಜ. ಲೈಟ್ ಇದ್ದಿರಲಿಲ್ಲ ಎಂದರೆ ನಿಜ. ತಾಡ ಪತ್ರೆ ಇರುವ ಕಾರಣ ಮತ್ತು ನಾವು ಒಳಗಡೆ ಇರುವ ಕಾರಣ ಹೊರಗಡೆ ಏನು ಆಗಿದೆ ಎಂದು ಗೊತ್ತಾಗುವುದಿಲ್ಲ ಎಂದರೆ ನಿಜ. ಸದರಿ ಇಂಡಿಕೇಟರ್ ಲೈಟನ್ನು ಹಾಕಿರಲಿಲ್ಲ ಎಂದರೆ ನಿಜ.

ನನ್ನ ಮೊಮ್ಮಗನ ತಪ್ಪು ಇದ್ದರು ಕೂಡಾ ಆರೋಪಿತನ ಮೇಲೆ ವಿಮೆ ಪರಿಹಾರಕ್ಕಾಗಿ ಸುಳ್ಳು ಅಪವಾದವನ್ನು ಆರೋಪಿತನ ಮೇಲೆ ಹೊರಿಸಲಾಗಿದೆ ಎಂದರೆ ಸರಿಯಲ್ಲ. ವಿಮೆ ಪರಿಹಾರಕ್ಕಾಗಿ ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ನಿಜ. ಆರೋಪಿತನ ತಪ್ಪು ಇರದೇ ಇದ್ದರು ಕೂಡಾ ವಿಮೆ ಪರಿಹಾರಕ್ಕಾಗಿ ಸುಳ್ಳು ಪ್ರಕರಣ ಆತನ ಹೊರಿಸಲಾಗಿದೆ ಎಂದರೆ ನಿಜ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ